ಸಿಸಿ ಃ 735/2021

ಚಾಸಾ –1

ಪ್ರಾಸಾ –1

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 04-06-2024

ಪಾಟಿ ಸವಾಲುಃ ಶ್ರೀ. ಹೆಚ್.ಈ.ಪಿ ವಕೀಲರಿಂದ

ನಾನು 7 ನೇ ತರಗತಿ ವಿದ್ಯಬ್ಯಾಸ ಮಾಡಿರುತ್ತೇನೆ, ನನಗೆ ಕನ್ನಡ ಓದಲು ಬರೆಯಲು ಅಷ್ಟಾಗಿ ಬರುವುದಿಲ್ಲ. ನನಗೆ ಇಬ್ಬರು ಮಕ್ಕಳಿರುತ್ತಾರೆ, 1 ನೇ ಭುವನ 2 ನೇ ಧನುಷ್. 2021 ಮೇ ತಿಂಗಳಲ್ಲಿ ದೇಶಾದ್ಯಂತ ಕರೋನ ದಿಂದ ಲಾಕ್ ಡೌನ್ ಇತ್ತು ಎಂದರೆ ಸರಿ. ಮೇ 2021 ಸಮಯದಲ್ಲಿ ಸರ್ಕಾರದ ವತಿಯಿಂದ ಯಾವುದೇ ಸಾರ್ವಜನಿಕರು ಸ್ವತಂತ್ರವಾಗಿ ಹೊರಗಡೆ ಓಡಾಡಲು ನಿರ್ಬಂಧ ಇತ್ತು ಎಂದರೆ ಸರಿ. ತುರ್ತು ಪರಿಸ್ಥಿತಿ ಇದ್ದಲ್ಲಿ ಮಾತ್ರ ಜಿಲ್ಲಾಧಿಕಾರಿಯಿಂದ / ಸಂಬಂಧಿಸಿದ ಇಲಾಖೆಯಿಂದ ಹೊರಗಡೆ ಹೋಗಲು ಅನುಮತಿ ಪಡೆಯಬೇಕು ಎಂದರೆ ಸರಿ. ಕುಶಾಲನಗರಕ್ಕೆ ನನ್ನ ತಂದೆ ಮನೆಗೆ ಹೋಗಲು ತುರ್ತು ಪರಿಸ್ಥಿತಿ ಇರಲಿಲ್ಲ, ನನ್ನ ತಂದೆ ಮನೆಯಿಂದ ಬೆಂಬಲೂರು ಗ್ರಾಮಕ್ಕೆ ವಾಪಸ್ಸು ಹೋಗಲು ಜಿಲ್ಲಾಧಿಕಾರಿಯಿಂದ ಅನುಮತಿ ಪಡೆದಿರುವುದಿಲ್ಲ. ಈಶ್ವರ ನನ್ನ ದೂರದ ಸಂಬಂಧಿಯಾಗಿರುತ್ತಾರೆ. ಅಪಘಾತಕ್ಕೆ ಒಳಗಾದ ಆಟೋ ಬಾಡಿಗೆಗೆ ಚಲಾಯಿಸುವ ಆಟೋ ಎಂದರೆ ಸರಿ.

ಈಶ್ವರ್ ದೊಡ್ಡತ್ತೂರು ಗ್ರಾಮದಲ್ಲಿ ಆಟೋ ಚಲಾಯಿಸುತ್ತಿದ್ದರು. ಬಾಡಿಗೆ ಚಲಾಯಿಸುವ ಆಟೋದವರಿಗೆ ಪರವಾನಿಗೆ ಪಡೆದ ಸ್ಥಳದಿಂದ 15 ಕಿಲೋ ಮೀಟರ್ ವ್ಯಾಪ್ತಿ ಹೊರಗಡೆ ಹೋಗುವ ಅವಕಾಶ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಕುಶಾಲನಗರದ ಗೌಡ ಸಮಾಜದ ಬಳಿ ಇದೆ. ಕುಶಾಲನಗರದಿಂದ ಬೆಂಬಲೂರು ಗ್ರಾಮಕ್ಕೆ ಕೂಡಿಗೆ, ಹೆಬ್ಬಾಳೆ, ಸಿದ್ದಲಿಂಗಪುರ, ಬಾಣವಾರ ಮಾಲಂಬಿ,

ಮಾರ್ಗವಾಗಿ ಹೋಗಬೇಕು ಎಂದರೆ ಸರಿ. ಆ ಮಾರ್ಗವಾಗಿ ಮೇ 2021 ರಲ್ಲಿ ವಾಹನ ಚಲಾವನೆ ಮಾಡಲು ಅವಕಾಶ ಕೊಡುತ್ತಿರಲಿಲ್ಲ ಎಂದರೆ ಸರಿ. ನಾವು ಸೋಮವಾರಪೇಟೆ ಒಳ ಮಾರ್ಗವಾಗಿ ಹೋಗಿರುತ್ತೇವೆ. ಕುಶಾಲನಗರದಿಂದ ಹೊರಟು ಗಣಗೂರು ತಲುಪುವರೆಗೆ ನಾವು ಪೊಲೀಸರನ್ನು ಭೇಟಿ ಮಾಡಲಿಲ್ಲ. ನಾವು ಪ್ರಯಾಣಿಸುತ್ತಿದ್ದ ಆಟೋ 3 ಚಕ್ರದ ಆಟೋ. ನಾವು 3 ಜನ ಕೂರುವಂತಹ ಆಟೋದಲ್ಲಿ ಹೋಗಿರುತ್ತೇವೆ. ಮೃತ ಭುವನ್ ಗೆ 15 ವರ್ಷ ವಯಸ್ಸು, ಧನುಷ್ ರವರಿಗೆ 13 ವರ್ಷ ವಯಸ್ಸು. ಆ ಆಟೋದಲ್ಲಿ ನಾನು, ನನ್ನ ತಂದೆ, ತಾಯಿ, ನನ್ನ ಇಬ್ಬರು ಮಕ್ಕಳು, ಆಟೋ ಚಾಲಕ ಹೋಗುತ್ತಿದ್ದೇವು.

ಆಟೋ ಹಿಂಭಾಗದಲ್ಲಿ ನಾನು, ನನ್ನ ತಂದೆ, ತಾಯಿ ಸೀಟ್ ಮೇಲೆ ಕುಳಿತಿದ್ದೇವು, ನನ್ನ ಸಣ್ಣ ಮಗ ನನ್ನ ತೊಡೆ ಮೇಲೆ, ದೊಡ್ಡ ಮಗ ನನ್ನ ತಾಯಿಯ ತೊಡೆ ಮೇಲೆ ಕುಳಿತಿದ್ದ. ನನ್ನ ತೊಡೆ ಮೇಲೆ ಕುಳಿತರೆ ಮುಂಭಾಗ ಬರುವ ವಾಹನಗಳು ಕಾಣುವುದಿಲ್ಲ ಎಂದರೆ ಸರಿ. ನಮ್ಮ ಎದುರುಗಡೆಯಿಂದ ಯಾವ ಯಾವ ವಾಹನಗಳು ಬಂದಿದ್ದವು ಎಂದು ನೋಡಿರುತ್ತೇನೆ. ನನ್ನ ತೊಡೆಯ ಮೇಲೆ ನನ್ನ ಸಣ್ಣ ಮಗ ಇದ್ದ ಆತ ಎತ್ತರವಾಗಿಲ್ಲ ಹಾಗಾಗಿ ಎದುರುಗಡೆಯಿಂದ ಬಂದ ವಾಹನಗಳು ಕಾಣಿಸಿರುತ್ತವೆ. ಅಪಘಾತ ಆದ ದಿನ ವಾಹನದ ಸಂಖ್ಯೆ ನೋಡಿಲ್ಲ. ಅಪಘಾತ ಪಡಿಸಿ ವಾಹನ ಅರ್ಧ ಗಂಟೆ ಅಲ್ಲೇ ನಿಲ್ಲಿಸಲಾಗಿತ್ತು. ನಾವು ಪ್ರಯಾಣಿಸುತ್ತಿದ್ದ ವಾಹನದ ಸಂಖ್ಯೆ ಆಗ ಗಮನಿಸಿಲ್ಲ. ಈ ಎರಡು ವಿಚಾರಗಳನ್ನು ಪೊಲೀಸರಿಗೆ ದೂರು ಕೊಡುವ ಸಮಯದಲ್ಲಿ ನಾನು ತಿಳಿಸಿಲ್ಲ.

**ಸಿಸಿ ಃ 735/2021**

**ಚಾಸಾ –1**

**ಪ್ರಾಸಾ –1**

ಗೋಣಿಮರೂರಿಂದ ಅಪಘಾತ ಆದ ಸ್ಥಳ ಗಣಗೂರು ಗ್ರಾಮದ ಬಳಿ ಆಗಿರುತ್ತದೆ. ಅಪಘಾತದ ಸ್ಥಳದ ಅಕ್ಕ ಪಕ್ಕ ಸುಮಾರು ಮನೆಗಳು ಇರುತ್ತವೆ. ಗೋಣಿಮರೂರಿಂದ ಗಣಗೂರು ಹೋಗುವ ಮಾರ್ಗ ಇಳಿಜಾರಿನಿಂದ ಕೂಡಿದೆ ಎಂದರೆ ಸರಿಯಲ್ಲ ಸಮತಟ್ಟಾಗಿದೆ. ಅಪಘಾತ ಪಡಿಸಿದ ವಾಹನ ನಮ್ಮ ಎದುರುಗಡೆಯಿಂದ ಬರುತ್ತಿತ್ತು ಆದರೆ ಯಾವ ಊರಿನಿಂದ ಬರುತ್ತಿತ್ತು ಎಂದು ಗೊತ್ತಿಲ್ಲ.

ದೂರನ್ನು ನನ್ನ ತಂದೆ ಹೇಳಿದಂತೆ ಪೊಲೀಸರು ಬರೆದಿರುತ್ತಾರೆ ಆಗ ನಾನು ಅಲ್ಲೇ ಇದ್ದೆ, ನಾನು ದೂರು ಕೊಟ್ಟಿಲ್ಲ ನನ್ನ ತಂದೆ ಕೊಟ್ಟಿರುತ್ತಾರೆ. ದೂರು ಕೊಡುವಾಗ ಈಶ್ವರ್ ಬಂದಿದ್ದರು. ಅಪಘಾತ ಪಡಿಸಿದ ವಾಹನ ನಮ್ಮ ವಾಹನಕ್ಕೆ ಮುಖಾ ಮುಖಿ ಡಿಕ್ಕಿಯಾಗಿರುತ್ತದೆ, ಅದು ರಭಸವಾಗಿ ಬಂದು ನಮ್ಮ ಆಟೋಗೆ ಗುದ್ದಿರುತ್ತದೆ. ನಮ್ಮ ವಾಹನದ ಮುಂಭಾಗದ ಗಾಜು ಹೊಡೆದಿಲ್ಲ ಆದರೆ ಜಖಂ ಆಗಿರುತ್ತದೆ. ಯಾವುದೇ ವಾಹನ ಪಲ್ಟಿ ಆಗಿರುವುದಿಲ್ಲ. ಅಪಘಾತ ಸಂಬಂಧ ನನಗೆ, ಚಾಲಕ ಈಶ್ವರ್ ಗೆ, ನನ್ನ ತಂದೆಗೆ ಯಾವುದೇ ಗಾಯ ಆಗಿಲ್ಲ. ಅಪಘಾತದಿಂದ ನನ್ನ ಮಗನ ಬಲಗೈಗೆ ಏಟಾಗಿರುತ್ತದೆ. ಅಪಘಾತ ಆದಾಗ ಗಣಗೂರು ಗ್ರಾಮದ ಸ್ಥಳಿಯರು ಸುಮಾರು ಜನ ಇದ್ದರು. ಅಪಘಾತ ಪಡಿಸಿದ ವಾಹನದ ಚಾಲಕನನ್ನು ಹೊರತುಪಡಿಸಿ ಇನ್ನೊಬ್ಬರು ಇದ್ದರು.

ಆಸ್ಪತ್ರೆಗೆ 7.45-8.00 ಗಂಟೆಗೆ ಹೋಗಿರುತ್ತೇವೆ. ವೈದ್ಯರ ಬಳಿ ಅಪಘಾತದ ವಿಚಾರ ನಾನು ತಿಳಿಸಿರುತ್ತೇನೆ. ಆಗ ಪೊಲೀಸರು ಬಂದು ನನ್ನನ್ನು ವಿಚಾರ ಮಾಡಿರುತ್ತಾರೆ. ದೂರನ್ನು ಆಸ್ಪತ್ರೆಯಲ್ಲಿ ಪೊಲೀಸರೇ ಬರೆದುಕೊಂಡಿರುತ್ತಾರೆ. ದೂರಿನ ವಿಚಾರವನ್ನು ಚಾಸಾ 4 ಮತ್ತು ನನ್ನ ತಂದೆ

ಹೇಳಿರುತ್ತೇವೆ. ದೂರಿನಲ್ಲಿ ಬರೆದಿರುವ ವಿಚಾರವನ್ನು ನಾನು ಓದಿ ತಿಳಿದುಕೊಂಡಿಲ್ಲ. ಆಸ್ಪತ್ರೆಯಲ್ಲಿ ಪೊಲೀಸರು ನನ್ನಿಂದ ಸಹಿ ಪಡೆದಿರುತ್ತಾರೆ. ಅಪಘಾತದ ಬಗ್ಗೆ ಹೇಳಿಕೆ ಪಡೆದು ಸಹಿ ಪಡೆದಿರುತ್ತಾರೆ. ಸಹಿ ಮಾಡಿದ ದಾಖಲೆಯನ್ನು ನಾನು ಓದಿ ತಿಳಿದುಕೊಂಡಿಲ್ಲ. ಪೊಲೀಸರೇ ಅದನ್ನು ಓದಿ ಹೇಳಿರುತ್ತಾರೆ. ಬೇರೆ ದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿಲ್ಲ. ಅಪಘಾತ ಸ್ಥಳಕ್ಕೆ ಪೊಲೀಸರು ನನ್ನನ್ನು ಕರೆಸಿ ತನಿಖೆ ಮಾಡಿಲ್ಲ. ಈಶ್ವರ್ ರವಗೆ ಆಟೋ ಚಲಾಯಿಸುವ ಯಾವುದೇ ಪರವಾನಿಗೆ ಇರಲಿಲ್ಲ ಎಂದು ದೂರು ಕೊಡುವ ಸಮಯದಲ್ಲಿ ಗೊತ್ತಾಗಿರುತ್ತದೆ. ಆಟೋ ಚಲಾಯಿಸುವ ಬ್ಯಾಡ್ಜ್ ಇರಲಿಲ್ಲ ಎಂದರೆ ಸರಿ. ನಾವು ಪ್ರಯಾಣಿಸಿ ಆಟೋಗೆ ವಿಮೇ ಸಹ ಇಲ್ಲ ಎಂದು ಗೊತ್ತಾಗಿರುತ್ತದೆ.

ನಾವು ಚಲಾಯಿಸುತ್ತಿದ್ದ ಆಟೋಗೆ ಕೇವಲ 3 ಜನರನ್ನು ಕರೆದುಕೊಂಡು ಹೋಗುವ ಸಾಮರ್ಥ್ಯ ಇದ್ದು ಚಾಸಾ 4 ಅತಿ ಹೆಚ್ಚು ಜನರನ್ನು ಕೂರಿಸಿಕೊಂಡು ಹೋಗಿ ಸ್ವಯಂ ಪ್ರೇರಿತವಾಗಿ ಅಪಘಾತ ಪಡಿಸಿದ್ದಾರೆ ಎಂದರೆ ಸರಿಯಲ್ಲ. ಚಾಸಾ 4 ರವರ ವಾಹಕ್ಕೆ ವಿಮೆ ಇಲ್ಲದ ಕಾರಣ ಮತ್ತು ಪರವಾನಿಗೆ ಇಲ್ಲದ ಕಾರಣ ಮತ್ತೊಂದು ವಾಹನದ ಮೇಲೆ ಪ್ರಕರಣ ದಾಖಲು ಮಾಡಿದರೆ ವಿಮೆ ಸಿಗುತ್ತದೆ ಎಂದು ಚಾಸಾ 4 ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾವಿದ್ದ ಆಟೋದಲ್ಲಿ ಬಲಭಾಗದಲ್ಲಿ ಕಬ್ಬಿಣದ ಗ್ರಿಲ್ ಇತ್ತು. ಅಪಘಾತದಲ್ಲಿ ಕಬ್ಬಿಣದ ಗ್ರಿಲ್ ಜಖಂ ಆದ ಬಗ್ಗೆ ನಾನು ನೋಡಿಲ್ಲ. ಆರೋಪಿ ಮತ್ತು ಅವರಿಗೆ ಸೇರಿದ ವಾಹನ ಯಾವುದೇ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರ ಮಾತನ್ನು ಕೇಳಿ ಪ್ರಕರಣ ದಾಖಲು ಮಾಡಿ ವಿಮೆ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

**ಸಿಸಿ ಃ 735/2021**

**ಚಾಸಾ –1**

**ಪ್ರಾಸಾ –1**

ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ರಸ್ತೆ ಅಪಘಾತ ಪರಿಹಾರ ಕೋರಿ ಹಾಸನದಲ್ಲಿ ಪ್ರಕರಣ ದಾಖಲು ಮಾಡಿರುತ್ತೇವೆ. ಅಪಘಾತ ಸ್ಥಳದಲ್ಲಿ ರಸ್ತೆ ನೇರವಾಗಿ ಇತ್ತು. ಅಪಘಾತ ಸ್ಥಳದ ರಸ್ತೆ ಎರಡು ವಾಹನಗಳು ಚಲಾಯಿಸುವ ರಸ್ತೆ ಆಗಿರುತ್ತದೆ. ಬೃಹತ್ ವಾಹನಗಳು ಅತಿವೇಗವಾಗಿ ಬಂದರೂ ಸುಲಭವಾಗಿ ಚಲಾಯಿಸಬಹುದು. ನನ್ನ ಮಗ ಮೃತ ಪಡಲು ಯಾವ ಸ್ಥಳಕ್ಕೆ ಗಾಯ ಆಗಿ ನಿಖರ ಕಾರಣ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ಅಪಘಾತ ಆದಾಗ ನನ್ನ ಮಗ ವಾಹನದ ಹೊರಗೆ ಬಿದ್ದಿದ್ದ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಶ್ವರ ರವರು ಮಾಡಿದ ಅಪಘಾತಕ್ಕೆ ಅವರನ್ನು ಬಚಾವ್ ಮಾಡಲು ಮತ್ತು ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.
ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಸಹಿ/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ